## Prajanudi (Kannada Daily)

Date: Saturday, August 10, 2013 Page No.3

Edition: Mysore Language: Kannada

# ಆರ್ಥಿಕ ಬಿಕ್ಕಟ್ಟಿನಿಂದ ಔದ್ಯೋಗಿಕ ಭದ್ರತೆ ಕುಸಿತ

## ಟಾಟಾ ಸ್ಟೀಲ್ ಸಿಎಫ್‌ಒ ಕೌಶಿಕ್ ಚಟರ್ಜಿ ಅಭಿಮತ



ಮೈಸೂರು, ಆ.9–ಆರ್ಥಿಕ ಬಿಕ್ಕಟ್ಟು ಎಂಬುದು ಇಡೀ ವಿಶ್ವದ ಸಮಸ್ಯೆ. ಒಂದು ದೇಶದ ಆರ್ಥಿಕ ಬಿಕ್ಕಟ್ಟು ಮತ್ತೊಂದು ದೇಶದ ವಿತ್ತೀಯ ಸ್ಥಿತಿಗತಿ ಮೇಲೆ ನೇರ ಪರಿಣಾಮ ಬೀರುತ್ತದೆ. ಇದಕ್ಕೆ ಉದಾಹರಣೆ ಎಂದರೆ ಅಮೆರಿಕದ ಗೋಲ್ಡನ್ ಸ್ಯಾಕ್ಸ್ ಬ್ಯಾಂಕ್ ಆರ್ಥಿಕ ಮುಗ್ಗಟ್ಟು ಎದುರಿಸಿದ ಪರಿಣಾಮವನ್ನು ಜಗತ್ತು ಅನುಭವಿಸಿದ್ದು, ಎಂದು ಟಾಟಾ ಸ್ಟೀಲ್ ಸಂಸ್ಥೆಯ ಸಿಎಫ್‌ಒ ಕೌಶಿಕ್ ಚಟರ್ಜಿ ಹೇಳಿದರು.

ಅವರು ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಎಸ್‌ಡಿಎಂ–ಐಎಂಡಿ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಹಣಕಾಸು ಮತ್ತು ಲೆಕ್ಕ ಪರಿಶೋಧನೆಯಲ್ಲಿ ಉದಯವಾಗುತ್ತಿರುವ ಪ್ರವೃತ್ತಿಗಳು ಕುರಿತ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿ, ಆರ್ಥಿಕತೆ ಎಂಬುದು ಜಾಗತಿಕ ಸಂಪರ್ಕ ಹೊಂದಿದ ಮಾಧ್ಯಮ. ಯಾವುದೇ ದೇಶ ಆರ್ಥಿಕ ದಿವಾಳಿತನ ಅಥವಾ ಮುಗ್ಗಟ್ಟು ಎದುರಿಸಿದರೆ ಅದು ನೆರೆಯ ದೇಶಗಳ ಮೇಲೆ ಅಥವಾ ಸದರಿ ದೇಶದ ಜತೆ ಸಂಪರ್ಕ ಹೊಂದಿರುವ ಮತ್ತೊಂದು ದೇಶದ ಆರ್ಥಿಕತೆ ಮೇಲೂ ದುಷ್ಪರಿಣಾಮ ಬೀರುವ ಸಾಧ್ಯತೆ ದಟ್ಟವಾಗಿದೆ. ಈ ಎಲ್ಲಾ ಸಮಸ್ಯೆಗಳ ನಿವಾರಣೆಗೆಂದೇ ಆರ್ಥಿಕತೆ, ಆಡಳಿತ ಮತ್ತು ಲೆಕ್ಕ ಪರಿಶೋಧನೆ ಕ್ಷೇತ್ರದಲ್ಲಿ ಆಗುತ್ತಿರುವ ಆವಿಷ್ಕಾರಗಳು ವಿಶಾಲ ವ್ಯಾಪ್ತಿ ಹೊಂದಿವೆ. ಇವುಗಳನ್ನು ಅರ್ಥಮಾಡಿಕೊಳ್ಳಬೇಕು ಎಂದರು.

ಯಾವುದೇ ದೇಶದ ಆರ್ಥಿಕ ಪರಿಸ್ಥಿತಿ ಆಯಾ ದೇಶಗಳು ರೂಪಿಸುವ ವಿತ್ತೀಯ ನೀತಿ ಮೇಲೆ ಅವಲಂಬಿತವಾಗಿರುತ್ತದೆ. ವಿದೇಶಿ ರಫ್ತು, ವ್ಯಾಪಾರ, ಆಮದು ಪ್ರಕ್ರಿಯೆಗಳು, ಸರ್ಕಾರಗಳು ರೂಪಿಸುವ ವಿತ್ತೀಯ ನೀತಿ ಮೇಲೆ ನಿರ್ಭರವಾಗಿರುತ್ತದೆ. 'ಅಕಸ್ಮಾತ್ ಹಣಕಾಸಿನ ಮುಗ್ಗಟ್ಟು ಎದುರಾದರೆ ಈ ಎಲ್ಲಾ ಕ್ಷೇತ್ರಗಳ ಮೇಲೆ ನೇರ ಪರಿಣಾಮ ಬೀರುವುದಲ್ಲದೇ ದೇಶದ ಆರ್ಥಿಕತೆ, ಜಿಡಿಪಿ, ರೂಪಾಯಿ ಮೌಲ್ಯ ಎಲ್ಲವೂ ಕುಸಿಯುತ್ತವೆ. ಸ್ಪಷ್ಟ ಆರ್ಥಿಕ ನೀತಿಯ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಪಾರದರ್ಶಕ ಆಡಳಿತಾಧಾರಿತ ಆರ್ಥಿಕ ನೀತಿ ಇರಬೇಕೆಂಬುದೇನೋ ನಿಜ. ಆದರೆ ಆಡಳಿತದಾರರ ಆಶಯಕ್ಕೆ ಅನುಗುಣವಾಗಿ ಆರ್ಥಿಕ ನೀತಿ ರೂಪಿತವಾಗುತ್ತಿವೆ. ವಾಸ್ತವವಾಗಿ ಸತ್ಯಾಧಾರಿತ ಆರ್ಥಿಕ ನೀತಿ ದೇಶದ ವಿತ್ತೀಯ ಸಮಸ್ಯೆಗಳನ್ನು ನಿವಾರಿಸುವುದು. ಒಂದೊಮ್ಮೆ 'ಆರ್ಥಿಕ ಮುಗ್ಗಟ್ಟು ಎದುರಾದರೆ, ಆ ದೇಶದ ನೌಕರರ ಕೆಲಸಕ್ಕೆ ಕುತ್ತು ಬರುತ್ತದೆ. ಅಮೆರಿಕದ ಗೋಲ್ಡನ್ ಸ್ಯಾಕ್ಸ್ ಬ್ಯಾಂಕ್ ಆರ್ಥಿಕ ಮುಗ್ಗಟ್ಟು ಎದುರಿಸಿದ್ದರಿಂದಾಗಿ ಎಷ್ಟೋ ಪ್ರತಿಷ್ಠಿತ ಕಂಪನಿಗಳ ಸಹಸ್ರಾರು ಉದ್ಯೋಗಿಗಳು ಕೆಲಸ ಕಳೆದುಕೊಂಡು ಮನೆಯಲ್ಲಿ ಕೂರುವಂತಾಯಿತು. ಭಾರತವೂ ಈ ಸ್ಥಿತಿಯಿಂದ ಹೊರತಾಗಿಲ್ಲ.

ಸಂಸ್ಥೆಗಳ ಆಡಳಿತ ನೀತಿ ಪಾರದರ್ಶಕವಾಗಿದ್ದಲ್ಲಿ ಎದುರಾಗುವ ಬಿಕ್ಕಟ್ಟುಗಳನ್ನು ಸಮರ್ಥವಾಗಿ ನಿಭಾಯಿಸಲು ಸಾಧ್ಯವಾಗುತ್ತದೆ. ಆದರೆ ಇಂದು ಸಂಸ್ಥೆಗಳ ಆಡಳಿತ ನೀತಿಗಳು ಪಾರದರ್ಶಕವಾಗಿಲ್ಲದೆ ಅನೇಕ ಸಮಸ್ಯೆಗಳು ಉದ್ಭವಿಸುತ್ತಿವೆ. ಅಲ್ಲದೆ, ಸಂಸ್ಥೆಗಳ ಲೆಕ್ಕಪರಿಶೋಧನೆ ಆಡಳಿತ ಆಧಾರಿತವಾಗಿರದೇ ತತ್ವಾಧಾರಿತವಾಗಿರಬೇಕು ಎಂದರು.

ಒಂದು ಸಂಸ್ಥೆಯಲ್ಲಿ ಆರ್ಥಿಕ ಬಿಕ್ಕಟ್ಟುಗಳು ಸಂಭವಿಸಿದಾಗ ಅಲ್ಲಿನ ನೌಕರರಿಗೆ ಉದ್ಯೋಗ ಭದ್ರತೆ ಕಡಿಮೆಯಾಗುತ್ತದೆ. ಭಾರತದಲ್ಲಿ ಈ ರೀತಿಯ ಪರಿಸ್ಥಿತಿಗಳು ಹೆಚ್ಚಿದ್ದರೆ, ಪಾಶ್ಚಿಮಾತ್ಯ ದೇಶಗಳಲ್ಲಿ ಈ ಸಮಸ್ಯೆ ಕಡಿಮೆಯಿದೆ. ಆದರೂ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪಾಶ್ಚಿಮಾತ್ಯ ದೇಶ ಗಳಲ್ಲಿಯೂ ಆರ್ಥಿಕ ಬಿಕ್ಕಟ್ಟು ಸಂಭವಿಸಿದಾಗ ಉದ್ಯೋಗ ಭದ್ರತೆ ಕಡಿಮೆಯಾಗುತ್ತಿದೆ ಎಂದರು.

ಒಂದು ಸಂಸ್ಥೆಯ ಬೆಳವಣಿಗೆ ಅಲ್ಲಿನ ಆಡಳಿತ ಮಂಡಳಿ ಮಾತ್ರವಲ್ಲದೆ, ಅಲ್ಲಿನ ನೌಕರರ ಜವಾಬ್ದಾರಿಯೂ ಆಗಿರುತ್ತದೆ. ಒಂದು ಸಂಸ್ಥೆಯಲ್ಲಿ ಬಿಕ್ಕಟ್ಟುಗಳು ಎದುರಾದಾಗ ಅದನ್ನು ನಿವಾರಿಸಲು ಹಲವು ದಶಗಳ ಹಿಂದಿನ ಕಾರ್ಯವಿಧಾನವನ್ನೇ ಬಳಸದೇ ಪ್ರಸ್ತುತದಲ್ಲಿ ಯಾವ ರೀತಿಯ ಕಾರ್ಯವಿಧಾನ ಅಗತ್ಯವಾಗುತ್ತದೆ ಎಂದು ಚಿಂತಿಸಿ ಮುಂದುವರೆಯಬೇಕಾಗುತ್ತದೆ. ಅಲ್ಲದೆ, ಯಾವುದೇ ಸಂಸ್ಥೆಗಳು ವಿಪತ್ತುಗಳಿಗೆ ಸಿಲುಕಿದಾಗ ಅದನ್ನು ವೈಜ್ಞಾನಿಕ ಚಿಂತನೆಗಳ ಮೂಲಕ ನಿವಾರಿಸಿಕೊಳ್ಳಬೇಕು ಎಂದು ಹೇಳಿದರು.

ಎಸ್‌ಡಿಎಂಐಎಂಡಿ ನಿರ್ದೇಶಕ ಎನ್.ಆರ್. ಪರಶುರಾಮ್, ಸಮ್ಮೇಳನ ಅಧ್ಯಕ್ಷ ಡಾ. ಉಲ್ಲಾಸ್ ರಾವ್ ಮತ್ತಿತರರು ಹಾಜರಿದ್ದರು.